**<u>ದಿನಾಂಕಃ 19.06.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀಸವಾಲುಃ ವಾದಿ ಪರ ವಕೀಲರಾದ ಶ್ರಿ. PDM ವಕೀಲರಿಂದಃ</u>**

1. ನನಗೆ ವಾದಿಯ ಪರಿಚಯ 2008 ನೇ ಇಸವಿಯಿಂದ ಗೊತ್ತಿದೆ. ನಾನು SSLC ಫೇಲ್ ಆಗಿರುತ್ತೇನೆ. ಕನ್ನಡ ಓದಲು ಬರೆಯಲು ಸ್ವಲ್ಪ ಬರುತ್ತದೆ. ಯಾವುದೇ ದಾಖಲೆಗೆ ಸಹಿ ಮಾಡಬೇಕಾದರೆ ಓದಿ ಅರ್ಥ ಮಾಡಿಕೊಂಡು ಸಹಿ ಮಾಡಬೇಕೆಂಬ ಸಾಮಾನ್ಯ ಜ್ಞಾನ ನನಗೆ ಇದೆ. ನನ್ನ ಪತ್ನಿಯ ಹೆಸರು ಕಮಲಾ. ನನ್ನ ಗಂಡು ಮಕ್ಕಳ ಹೆಸರು ಅನಿಲ್ ಮತ್ತು ಮನೋಜ್ ಹಾಗೂ ನನಗೆ ಒಬ್ಬಳು ಮಗಳಿದ್ದು ಆಕೆಯ ಹೆಸರು ಅನಿತಾ.

2. 2008 ರಲ್ಲಿ ನನ್ನ ಹಾಗೂ ವಾದಿಯ ಮಧ್ಯ ದಾವಾ ಎ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ joint development agreement ಆಗಿತ್ತು ಎಂದರೆ ನಿಜ. 2 ನೇ ಪ್ರತಿವಾದಿಯ ಪರಿಚಯ ಇಲ್ಲ. ಈ ಕೇಸಿಗೋಸ್ಕರ 2 ನೇ ಪ್ರತಿವಾದಿಯ ಪರಿಚಯ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2013 ರಲ್ಲಿ 2 ನೇ ಪ್ರತಿವಾದಿಯನ್ನು ವಾದಿಯ ಬಳಿ ಕರೆದುಕೊಂಡು ಬಂದು ಅಗ್ರೀಮೆಂಟ್ ಕ್ಯಾನ್ಸಲ್ ಮಾಡುವಂತೆ ಹೇಳಿದ್ದೆ ಎಂದರೆ ಸರಿಯಲ್ಲ, ನನಗೆ ಅದು ಗೊತ್ತೇ ಇಲ್ಲ. ನನ್ನ ಹಾಗೂ 2 ನೇ ಪ್ರತಿವಾದಿಯ ಒತ್ತಾಯಕ್ಕೆ ಮಣಿದು ದಿಃ19.02.2013 ರಂದು 2008 ರಲ್ಲಿ ಆದ joint development agreement ನ್ನು ಕ್ಯಾನ್ಸಲ್ ಮಾಡಲಾಯಿತು ಎಂದರೆ ಸರಿಯಲ್ಲ. ಅದೇ ದಿನ ಅಂದರೆ 19.02.2013 ನಾನು 2 ನೇ ಪ್ರತಿವಾದಿಯ ಜೊತೆ ಹೊಸದೊಂದು joint development agreement ಮಾಡಿಕೊಂಡೆ ಎಂದರೆ , ವಾದಿಯೇ ವ್ಯವಹಾರ ಮಾಡಿ ಅಗ್ರೀಮೆಂಟ್ ಗೆ ಸಹಿಗಳನ್ನು ಪಡೆದರು. ವಾದಿಗೂ, ನನ್ನ ಹಾಗೂ 2 ನೇ ಪ್ರತಿವಾದಿ ನಡುವೆ ಆದ joint development agreement ಗೆ ಯಾವುದೇ ಸಂಬಂಧವಿಲ್ಲ,

ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹಾಗೂ 2 ಪ್ರತಿವಾದಿಯ ಒತ್ತಾಯದಿಂದಲೇ 2008 ರ joint development agreement ರದ್ದಾಯಿತು ಎಂದರೆ ಸುಳ್ಳು. ಈಗ ತೋರಿಸಿದ ನಿಪಿ. 1 ರಲ್ಲಿ ಇರುವ ಭಾವಚಿತ್ರ ನನ್ನದೇ ಹಾಗೂ ಸಹಿ ಕೂಡ ನನ್ನದೆ. ನಿಪಿ. 1 ರಲ್ಲಿರುವ ನನ್ನ ಸಹಿಗಳನ್ನು ನಿಪಿ. 1 (ಬಿ,ಸಿ,ಡಿ,ಇ) ಎಂದು ಗುರುತಿಸಲಾಯಿತು. ಈಗ ತೋರಿಸಿದ ನಿಪಿ. 2 supplemental agreement ನಲ್ಲಿರುವ ಸಹಿ ನನ್ನದೆ. ನಿಪಿ. 2 ರಲ್ಲಿರುವ ನನ್ನ ಸಹಿಗಳನ್ನು ನಿಪಿ. 2 (ಡಿ,ಇ,ಎಫ್,ಜಿ) ಎಂದು ಗುರುತಿಸಲಾಯಿತು.

3. ನಿಪಿ. 1 ಆದಾಗಾ ವಾದಿಯು ನನಗೆ ರೂ. 4 ಲಕ್ಷ ನಗದು ಹಣ ಹಾಗೂ ತಲಾ ರೂ. 5 ಲಕ್ಷದ 4 ಚೆಕ್ ಗಳು ಹಾಗೂ ರೂ. 10 ಲಕ್ಷದ 1 ಚೆಕ್ ನ್ನು ನೀಡಿದ್ದರು ಎಂದರೆ , ಒಟ್ಟಾಗಿ ರೂ. 29 ಲಕ್ಷ ಮಾತ್ರ ನನಗೆ ಬಂದಿದೆ. ರೂ. 5 ಲಕ್ಷದ 1 ಚೆಕ್ ನ್ನು ನಗಧೀಕರಿಸಿಕೊಳ್ಳಲು ನನಗೆ ಸಾಧ್ಯವಾಗಲಿಲ್ಲವೆಂದು, ಅದರ ಜೊತೆ ಇನ್ನೂ ಹಣ ಬೇಕು ಎಂದು ನಾನು ವಾದಿಯಲ್ಲಿ ಕೇಳಿದ್ದರಿಂದ ರೂ. 15 ಲಕ್ಷವನ್ನು ಚೆಕ್ ಮೂಲಕ ನನಗೆ ನೀಡಿದರು ಎಂದರೆ ಸರಿಯಲ್ಲ. ದಿಃ 31.03.2015 ರಂದು ನಿಪಿ. 2 ರಂತೆ ರೂ. 5 ಲಕ್ಷದ 1 ಚೆಕ್ ನ್ನು ಹಾಗೂ ರೂ. 10 ಲಕ್ಷದ ಇನ್ನೊಂದು ಚೆಕ್ ನ್ನು ಪಡೆದು ನಗಧೀಕರಿಸಿ ನಿಪಿ. 2 ನ್ನು ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ, ವಾದಿಯು ನನ್ನ ಬಲ್ಲಳ್ಳಿಯಲ್ಲಿರುವ 4 ಏಕರೆ ಜಮೀನನ್ನು ಅಭಿವೃದ್ದಿ ಮಾಡಿಸಿಕೊಡುತ್ತೇನೆ ಎಂದು ಹೇಳಿ ಖಾಲಿ ಪೇಪರ್ ಗೆ ಸಹಿ ಹಾಕಿಸಿಕೊಂಡು ಹೋದರು. ನನಗೆ ವಾದಿಯು ಖಾಲಿ ಪೇಪರ್ ಗೆ ಸಹಿ ಮಾಡಿಸಿಕೊಂಡಿದ್ದಾರೆ ಎಂದು ವಾದಿಯ ವಿರುದ್ದ ದೂರು ಕೊಟ್ಟಿದ್ದೇನೋ ಎಂದರೆ, ಇಲ್ಲ. ದಾವಾ ಷೇಢ್ಯೂಲ್ ಆಸ್ತಿಗೆ ಸಂಬಂಧಪಟ್ಟ ವ್ಯವಹಾರವನ್ನು ಹೊರತುಪಡಿಸಿ ಬೇರೆ ಯಾವುದೇ ವ್ಯವಹಾರವು ವಾದಿ ಮತ್ತು

ನನ್ನ ನಡುವೆ ನಡೆದಿಲ್ಲ ಎಂದರೆ ಸುಳ್ಳು. ವಾದಿ ಮತ್ತು ನನ್ನ ನಡುವೆ ಬೇರೆ ವ್ಯವಹಾರ ಆಗಿದೆ ಎಂದು ಹೇಳಿದ ಕುರಿತು ದಾಖಲಾತಿ ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಏನಾದರೂ ಇದೇಯೋ ಎಂದರೆ, ವಾದಿಯು ವರಾಹ developers ರವರನ್ನು ಕರೆದುಕೊಂಡು ಬಂದು ನನ್ನ ಬೇರೆ ಜಮೀನಿನ ಬಗ್ಗೆ ವ್ಯವಹಾರ ನಡೆಸಿರುತ್ತಾರೆ, ನನಗೂ ವಾದಿಗೂ ಬೇರೆ ಯಾವುದೇ ವ್ಯವಹಾರ ಆಗಿಲ್ಲ. ವಾದಿಗೂ ವರಾಹ developers ಗೆ ಯಾವುದೇ ಸಂಬಂಧವಿಲ್ಲ ವಾದಿಯು ವರಾಹ developers ರವರನ್ನು ಕರೆದುಕೊಂಡು ಬಂದು ನನ್ನ ಬೇರೆ ಜಮೀನಿನ ಬಗ್ಗೆ ವ್ಯವಹಾರ ನಡೆಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ. 2 ದಾಖಲಾತಿ ಆಗುವಾಗ ನನ್ನ ಹೆಂಡತಿ ಹಾಗೂ ನನ್ನ ಮಗ ಅನಿಲ್ ರವರು ಹಾಜರಿದ್ದು, ಅವರು ಕೂಡ ಸಾಕ್ಷಿಯಾಗಿ ಸದರಿ ದಾಖಲೆಗೆ ಸಹಿ ಮಾಡಿದ್ದಾರೆ ಎಂದರೆ ಖಾಲಿ ಪತ್ರಕ್ಕೆ ಸಹಿ ಪಡೆದಿದ್ದಾರೆ. ವಾದಿಯು ಖಾಲಿ ಪತ್ರಕ್ಕೆ ಸಹಿ ಪಡೆದಿದ್ದಾರೆ ಎಂದು ಈ ಕೇಸಿಗೋಸ್ಕರ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ದಿಃ 17.03.2018 ರಲ್ಲಿ ವಾದಿಯು ನನಗೆ ಈಗ ತೋರಿಸುತ್ತಿರುವ ನಿಪಿ. 3 ನೋಟೀಸ್ ನ್ನು ನೀಡಿದ್ದಾರೆ ಎಂದರೆ ನಿಜ, ನಾನು ಅದಕ್ಕೆ ಉತ್ತರವನ್ನು ಕೊಟ್ಟಿದ್ದೇನೆ. ಸದರಿ ಉತ್ತರ ಈಗ ತೋರಿಸಿದ ನಿಪಿ. 4 ಆಗಿದೆ ಎಂದರೆ ನಿಜ. ವಾದಿಯು ನಿಪಿ. 3 ನೋಟೀಸ್ ನಲ್ಲಿ ತಾನು ನೀಡಿದ ರೂ.44 ಲಕ್ಷ ಹಣವನ್ನು ಬಡ್ಡಿ ಸಮೇತ ವಾಪಸ್ಸು ಕೊಡಬೇಕೆಂದು ಕೇಳಿಕೊಂಡಿದ್ದರು ಎಂದರೆ ನಿಜ. ನಾನು ನಿಪಿ. 4 ಉತ್ತರ ನೀಡಿ ರೂ. 44 ಲಕ್ಷ ಹಣವನ್ನು ವಾದಿಯಿಂದ ಪಡೆದಿಲ್ಲ, ವಾದಿಯೇ ನನಗೆ ರೂ. 29 ಲಕ್ಷ ಬಡ್ಡಿ ಸಮೇತ ಹಿಂದಿರುಗಿಸಬೇಕೆಂದು ಹೇಳಿದ್ದೆ ಎಂದರೆ ನಿಜ. ವಾದಿಯು ರೂ. 16 ಲಕ್ಷ ಹಣವನ್ನು ಕೊಟ್ಟು ಸೇಲ್ ಡೀಡ್ ಬರೆಸಿಕೊಳ್ಳಲು ತಯಾರಿದ್ದರೂ ನಾನು ಹಾರಿಕೆಯ (evasive) ಉತ್ತರ

ನೀಡಿದ್ದೆ ಎಂದರೆ ,ನನಗೆ ನಿಗಧಿತ ಸಮಯದಲ್ಲಿ ಹಣ ನೀಡಿಲ್ಲ ನಾನು ಬಡ್ಡಿ ಕಟ್ಟಲು ಆಗುವುದಿಲ್ಲ ಬೇಕಾದರೆ ದುಡ್ಡು ಕೊಡುತ್ತೇನೆ ಎಂದು ಹೇಳಿದ್ದೆ, ಆದರೆ ವಾದಿಯು ನನ್ನ ಬಳಿ ಬಂದಿಲ್ಲ. ನ್ಯಾಯಾಲಯದಲ್ಲಿ ಪ್ರಪ್ರಥಮ ಬಾರಿಗೆ ಹಣವನ್ನು ಕೊಡಲು ನಾನು ಸಿದ್ದ ಇದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. Supplemental agreement ಪ್ರಕಾರ ಉಳಿಕೆ ರೂ. 16 ಲಕ್ಷ ಹಣವನ್ನು ಪಡೆದುಕೊಂಡು ಕ್ರಯಪತ್ರ ಮಾಡಿಕೊಡುವುದಾಗಿ ಒಪ್ಪಿಕೊಂಡಿದ್ದೆ ಆದರೂ ಹಣ ವಾಪಸ್ಸು ಕೊಡಲೂ ಮತ್ತು ಸೇಲ್ ಡೀಡ್ ಮಾಡಿಕೊಡಲು ಕೂಡ ತಯಾರಿರಲಿಲ್ಲ ಎಂದರೆ, ನಿಗಧಿತ ಸಮಯದಲ್ಲಿ ವಾದಿಯು ಲೇ ಔಟ್ ಮಾಡಿಕೊಟ್ಟಿರಲಿಲ್ಲ ಹಾಗಾಗೀ ನಾನು ಹೇಗೆ ಹಣ ಕೊಡಲಿ ಎಂದು ಹೇಳಿದ್ದೆ. ಲೇ ಔಟ್ ಅಭಿವೃದ್ಧಿ ಪಡಿಸುವ ಕೆಲಸ ವಾದಿಯದ್ದಲ್ಲ ಅಂದರೆ, ವಾದಿಯೇ ಮೊದಲು ನನಗೆ ಮೊಸ ಮಾಡಿದ್ದಾರೆ, ಅಭಿವೃದ್ಧಿ ಪಡಿಸುವ ಕೆಲಸ ವಾದಿಯದ್ದೆ ಆಗಿತ್ತು. ನಾನು ಹಾಗೂ 2 ನೇ ಪ್ರತಿವಾದಿ ದಾವಾ ಷೆಡ್ಯೂಲ್ ಸ್ವತ್ತನ್ನು ಅಭಿವೃದ್ಧಿ ಪಡಿಸಿದ ನಂತರ ನನ್ನ (ಮಾಲೀಕನ) ಭಾಗಕ್ಕೆ ಬಂದಿರುವ ಸೈಟ್ ಗಳಲ್ಲಿ 15 ಸಾವಿರ ಚದರ್ ಅಡಿಯ ಅಳತೆಯಲ್ಲಿ ಬರುವ ಸೈಟ್ ಗಳನ್ನು ವಾದಿಗೆ ಕ್ರಯಪತ್ರಕ್ಕೆ ಮಾಡಿಕೊಡುವ ಜವಬ್ದಾರಿ ನನ್ನದಾಗಿತ್ತು ಎಂದರೆ, ನಿಗಧಿತ ಸಮಯದಲ್ಲಿ ವಾದಿ ನನಗೆ ಹಣವನ್ನು ಕೊಟ್ಟಿಲ್ಲ ಮತ್ತು ಜಮೀನನ್ನು ಅಭಿವೃದ್ದಿಪಡಿಸಿಯೂ ಕೊಟ್ಟಿಲ್ಲ.

**ಮುಂದುವರೆದ ಪಾಟೀಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು**

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

(ಉಷಾರಾಣಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.